## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 316/2019

ಸಾಕ್ಷಿಗೆ ದಿನಾಂಕ 07-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 5

| | | |
|---|---|---|
| ಹೆಸರು | ಃ | ಪಿ ಎನ್ ಲೋಕೇಶ್ |
| ತಂದೆಯ ಹೆಸರು | ಃ | ಪಿ ನಾಗೇಂದ್ರಪ್ಪ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ |
| ವಾಸ ಸ್ಥಳ | ಃ | ದಾವಣಗೆರೆ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ದಿಃ 20-08-2018 ರಿಂದ 16-10-2019 ರವರೆಗೆ ಹೊಸಪೇಟೆ ಎ ಸಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-08-2019 ರಂದು ತುಂಗಭದ್ರಾ ನಂದಿಗೆ ಒಳಹರಿವು ಹೆಚ್ಚಿದ್ದರಿಂದ ಹಿನ್ನೀರು ಪ್ರದೇಶದಲ್ಲಿ ಜನ ಜಾನುವಾರು ಮತ್ತು ಕೃಷ್ಟಿ ಭೂಮಿಗಳಿಗೆ ಹಾನಿಯಾಗಬಾರದೆನ್ನುವ ಉದ್ದೇಶದಿಂದ ಅಧಿಕಾರಿಗಳ ತಂಡದೊಂದಿಗೆ ಹೆಚ್ ಬಿ ಹಳ್ಳಿ ತಾಃ ನ ತಂಬ್ರಹಳ್ಳಿ ಕಿತ್ತೂರು, ಮುತ್ಕೂರು, ಹಂಪಸಾಗರ ಈ ಗ್ರಾಮಗಳಿಗೆ ಪರಿಶೀಲನೆಗಾಗಿ ಹೋಗಿದ್ದು ಇರುತ್ತದೆ. ನನ್ನ ಜೊತೆ ಚಾಸಾ-5, ಚಾಸಾ-10, ಚಾಸಾ-7, ಚಾಸಾ-8, ಚಾಸಾ-6, ಚಾಸಾ-11, ಚಾಸಾ-9, ಚಾಸಾ-12 ರವರು ಇದ್ದರು. ತಂಬ್ರಹಳ್ಳಿ ಕಿತ್ನೂರು ಮತ್ತು ಮುತ್ಕೂರು ಗ್ರಾಮದ ಪರಿಶೀಲನೆ ಮುಗಿಸಿಕೊಂಡು ಮದ್ಯಾಹ್ನ 3. ಗಂಟೆ ಸಮಯದಲ್ಲಿ ನಾವು ಹಂಪಸಾಗರ-3 ಗ್ರಾಮಕ್ಕೆ ಬಂದಾಗ ಅಲ್ಲಿಯ ಸಮುದಾಯ ಭವನದ ಮುಂದೆ ಬಹಳಷ್ಟು ಜನರಿದ್ದರು. ಅದರ ಬಗ್ಗೆ ನಾವು ಪರಿಶೀಲಿಸಿ ನೋಡಿದಾಗ ಅಲ್ಲಿ ಒಂದು ನ್ಯಾಯಬೆಲೆ ಅಂಗಡಿ ಇತ್ತು ಅಲ್ಲಿ ಪಡಿತರ ವಿತರಣೆ ಕಾರ್ಯ ನಡೆದಿತ್ತು. ನಾವು ಹೋಗಿ 1ನೇ ಆರೋಪಿಗೆ ದಾಸ್ತಾನು ರಿಜಿಸ್ಟರ್ ಮತ್ತು ವಿತರಣಾ ವಹಿಯನ್ನು ಕೇಳಿದೆವು ಅವನ ಬಳಿ ಸದರಿ ವಹಿಗಳು ಇರಲಿಲ್ಲ. ಕೇವಲ ಬಿಲ್ ಬುಕ್ ಮಾತ್ರ ಅವನ ಬಳಿಯಿತು. ಅವನಿಗೆ

ನಾವು ಸದರಿ ವಹಿಗಳನ್ನು ಹಾಜರುಪಡಿಸಲು ಕೇಳಿದಾಗಿ ಏಕಾಏಕಿ 1ನೇ ಆರೋಪಿ ಸಿಟ್ಟಿಗೆದ್ದು ಇದನ್ನೆಲ್ಲಾ ಕೇಳೋಕೆ ನೀವ್ಯಾರು ನೀವು ಯಾರ ಚಿತಾವಣೆಯಿಂದ ಇಲ್ಲಿಗೆ ಬಂದಿದ್ದೀರಿ ಎನ್ನುವುದು ನನಗೆ ಗೊತ್ತು ಅಂತಾ ಹೇಳಿ ಚಾಸಾ-1 ರವರಿಗೆ ತಳ್ಳಿದನು. ಆಗ ನಾನು ಮತ್ತು ಚಾಸಾ-5 ರವರು ಬಿಡಿಸಲು ಹೋದಾಗ 1 , 2, 3, 4, 5 ನೇ ಆರೋಪಿತರು ಸೇರಿ ಎಲ್ಲಾ ಅಧಿಕಾರಿಗಳನ್ನು ತಳ್ಳುತ್ತಾ ಬಂದರು. ಚಾಸಾ-1 ರವರ ಮೇಲೆ ಆರೋಪಿತರೆಲ್ಲರೂ ಜೋರಾಗಿ ದೂಕಿ ಹಲ್ಲೆ ಮಾಡಿದರು. ತಕ್ಷಣ ನಾವು ಪೋಲೀಸರಿಗೆ ಕರೆ ಮಾಡಿ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿ ಅವಾಚ್ಯವಾಗಿ ಬೈಯುತ್ತಿದ್ದಾರೆ ದಯವಿಟ್ಟು ಬಂದು ಪ್ರಕರಣ ದಾಖಲಿಸಿಕೊಳ್ಳಿ ಅಂತಾ ಕೇಳಿಕೊಂಡೆವು. ಚಾಸಾ-1 ರವರಿಗೆ ಪ್ರಕರಣ ದಾಖಲು ಮಾಡಲು ನಾನು ನಿರ್ದೇಶನ ನೀಡಿರುತ್ತೇನೆ. ಘಟನೆಯ ಕುರಿತು ನಾನು ಹೇಳಿಕೆ ನೀಡಿದ್ದೇನೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರು ಇದ್ದು ಇನ್ನುಳಿದ ಆರೋಪಿತರು ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ